ದಿನಾಂಕಃ 18-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಎ.ಆರ್.ಎಮ್. ವಕೀಲರಿಂದಃ**

12. ನಾನು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿವೆ ಮತ್ತು ಅದಕ್ಕೆ ನಾನು ನನ್ನ ಸಹಿ ಮಾಡಿರುತ್ತೇನೆ.

1. ಭೂಸ್ವಾಧೀನವಾದ ಸರ್ವೆ ನಂ. 220/2 ರ 2007-08 ನೇ ಸಾಲಿನ ಆರ್.ಟಿ.ಸಿ ನಿಪಿ-1
2. ಭೂಸ್ವಾಧೀನವಾದ ಸರ್ವೆ ನಂ. 220/3 ರ 2007-08 ನೇ ಸಾಲಿನ ಆರ್.ಟಿ.ಸಿ ನಿಪಿ-2
3. ಶ್ರೀ.ರೇಣುಕಾ ಶುಗರ್ಸ ಲಿಮಿಟೆಡ್ ಗೆ ಕಬ್ಬು ಕೊಟ್ಟ ಬಗ್ಗೆ ಒಂದು ಕಬ್ಬಿನ ತೂಕದ ಬಿಲ್ಲುಗಳು ನಿಪಿ-3
4. ಶ್ರೀ.ರೇಣುಕಾ ಶುಗರ್ಸ ಲಿಮಿಟೆಡ್ ಗೆ ಕಬ್ಬು ಕೊಟ್ಟ ಬಗ್ಗೆ ಇನ್ನೊಂದು ಕಬ್ಬಿನ ತೂಕದ ಬಿಲ್ಲುಗಳು ನಿಪಿ-4
5. ಮೊಳೆ ಗ್ರಾಮದ ಸರ್ವೆ ನಂ.158/1ಬ/2 ರ 5 ಗುಂಟೆ ಜಮೀನನ್ನು ದಿಃ 08.02.2010 ರ ನೊಂದಾಯಿತ ಖರೀದಿ ಪತ್ರದ ಮೂಲಕ 1,09,000/- ಗಳಿಗೆ ಮಾರಾಟ ಮಾಡಿದ ಕ್ರಯ ಪತ್ರದ ದೃಢೀಕೃತ ನಕಲು ನಿಪಿ-5
6. ಐನಾಪೂರ ಗ್ರಾಮದ ಸರ್ವೆ ನಂ.767/2 ರ ದಿಃ05.02.2011 ರ 1 ಎಕರೆ 20

ಗುಂಟೆ ಜಮೀನನ್ನು 15,00,000/- ಗಳಿಗೆ ಮಾರಾಟ ಮಾಡಿದ ಬಗ್ಗೆ ಕ್ರಯ ಪತ್ರದ ದೃಢೀಕೃತ ನಕಲು ನಿಪಿ-6

7. ಮೊಳೆ ಗ್ರಾಮದ ಸರ್ವೆ ನಂ.314/1 ರ 2 ಎಕರೆ ಜಮೀನನ್ನು ರೂ.18,00,000/- ಗಳಿಗೆ ಮಾರಾಟ ಮಾಡಲು ಒಪ್ಪಿ ದಿ 01.08.2012 ರಂದು ಆದ ನೊಂದಾಯಿತ ಕಬ್ಜಾರಹಿತಿ ಖರೀದಿ ಕರಾರು ಪತ್ರದ ದೃಢಿಕೃತ ನಕಲು ನಿಪಿ-7

8. ಮಂಗಸೂಳಿ ಗ್ರಾಮದ ಸರ್ವೆ ನಂ.291ಅ/4ಕ/2 ರ ಕ್ಷೇತ್ರ 1 ಎಕರೆ ನ್ನು 7,00,000/- ರೂ. ಗಳಿಗೆ ಮಾರಾಟ ಮಾಡಿದ ಬಗ್ಗೆ 20.02.2013 ರ ಖರೀದಿ ಪತ್ರದ ದೃಢೀಕೃತ ನಕಲು ನಿಪಿ-8.

9. ಮೋಳೆ ಗ್ರಾಮದ ಸರ್ವೆ ನಂ.160 ರ 11 ಗುಂಟೆ ಜಮೀನನ್ನು ರೂ.5,00,000/- ಗಳಿಗೆ ಮಾರಾಟ ಮಾಡಲು ಒಪ್ಪಿ ದಿ 19.09.2011 ರಂದು ಮಾಡಿಕೊಂಡ ಖರೀದಿ ಕರಾರು ಪತ್ರದ ದೃಢಿಕೃತ ನಕಲು ನಿಪಿ-9

10. ಮೋಳೆ ಗ್ರಾಮದ ಸರ್ವೆ ನಂ.248/1ಬಿ ಖರೀದಿ ಕರಾರು ಪತ್ರದ ದೃಢಿಕೃತ ನಕಲು ನಿಪಿ-10

11. ಕಬ್ಬಿನ ದರದ ಪಟ್ಟಿಯ ದೃಢೀಕೃತ ನಕಲು ನಿಪಿ-11

12. ಇಳುವರಿ ಪ್ರಮಾಣ ಪತ್ರದ ದೃಢೀಕೃತ ನಕಲು ನಿಪಿ-12

13. ಎಂ.ಎಸ್.ಎ.100154/2017 ರಲ್ಲಿ ಆದ ತೀರ್ಪಿನ ದೃಢೀಕೃತ ನಕಲು ನಿಪಿ-13

14. ಎಲ್.ಎ.ಸಿ ನಂ.129/21 ರಲ್ಲಿ ಇದೇ ನ್ಯಾಯಾಲಯದಲ್ಲಿ ಆದ ತೀರ್ಪಿನ ದೃಢೀಕೃತ ನಕಲು ನಿಪಿ–14

**ಪಾಟೀ ಸವಾಲುಃ 1 ಮತ್ತು 3ನೇ ಎದುರುದಾರ ಪರ ಡಿಜಿಪಿ ರವರಿಂದ**

13. ನನ್ನ ಆಧಾರ ಕಾರ್ಡನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇಲ್ಲ ಎಂದರೆ ನಿಜ. ಮೋಳೆ ಇದು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇದೆ ಎಂದರೆ ನಿಜ. ಮೋಳೆಯಲ್ಲಿ ಪಟ್ಟಣ ಪಂಚಾಯತಿ ಇರುವುದಿಲ್ಲ. ಮೋಳೆಯಿಂದ ಮಂಗಸೂಳಿಗೆ 11 ಕಿ.ಮೀ ದೂರ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಅರ್ಧ ಕಿ.ಮೀ ದೂರ ಇದೆ ಎನ್ನುತ್ತಾರೆ. ಐನಾಪುರದಲ್ಲಿ ಪಟ್ಟಣ ಪಂಚಾಯತಿ ಇದೆ ಎಂದರೆ ನಿಜ. ಐನಾಪುರ ಮೋಳೆಯಿಂದ 10 ಕಿ.ಮೀ ದೂರ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು 2 ಕಿ.ಮೀ ಒಳಗೆ ಇದೆ ಎನ್ನುತ್ತಾರೆ. ಐನಾಪುರದಲ್ಲಿ ಪಟ್ಟಣ ಪಂಚಾಯತಿ ಇರುವುದರಿಂದ ಅಲ್ಲಿ ಅಭಿವೃದ್ಧಿ ಹೊಂದಿದೆ ಎಂದರೆ ನಿಜ. ಐನಾಪುರದಲ್ಲಿ ಪಟ್ಟಣ ಪಂಚಾಯತಿ ಇರುವುದರಿಂದ ಅಲ್ಲಿನ ಜಮೀನುಗಳಿಗೆ ಕಿಮ್ಮತ್ತು ಜಾಸ್ತಿ ಇದೆ ಎಂದರೆ ಸಾಕ್ಷಿಯು ಮೋಳೆ ಮತ್ತು ಐನಾಪುರದಲ್ಲಿ ಇರುವ ಜಮೀನುಗಳಿಗೂ ಒಂದೇ ಮೌಲ್ಯ ಇರುತ್ತದೆ ಎನ್ನುತ್ತಾರೆ. ಮಂಗಸೂಳಿ ಮತ್ತು ಐನಾಪುರ ಗ್ರಾಮಗಳು ಮೋಳೆ ಗಿಂತ ದೊಡ್ಡ ಊರ ಎಂದರೆ ಸರಿಯಲ್ಲ. ಮೋಳೆ ಗ್ರಾಮ ಪಂಚಾಯತಿಯಲ್ಲಿ 35 ಜನ ಸದಸ್ಯರು ಇದ್ದಾರೆ ಎನ್ನುತ್ತಾರೆ. ಗ್ರಾಮ ಪಂಚಾಯತಿಗಿಂತ ಊರು ದೊಡ್ಡದು ಇದ್ದರೆ ಪಟ್ಟಣ ಪಂಚಾಯತಿ ಮಾಡುತ್ತಾರೆ ಎಂದರೆ ಸರಿಯಲ್ಲ, 2–3 ಊರು ಸೇರಿಸಿ ಜನಸಂಖ್ಯೆ ಇದ್ದುದ್ದರಿಂದ ಪಟ್ಟಣ ಪಂಚಾಯತಿ ಮಾಡಲಾಗಿದೆ ಎನ್ನುತ್ತಾರೆ.

14. ಮೋಳೆಯ ಗ್ರಾಮ ನಾಕಾಶೆ ಇದೆ ಎಂದರೆ ನಿಜ. ಮೋಳೆ ಗ್ರಾಮದ ಗ್ರಾಮ

ನಕಾಶೆಯಲ್ಲಿ ಆ ಗ್ರಾಮದ ಸುತ್ತಮುತ್ತ ಊರುಗಳ ಬಗ್ಗೆ ನಮೂದು ಇದೆ ಎಂದರೆ ನಿಜ. ನನಗೆ ಮೋಳೆ ಗ್ರಾಮದ ಗ್ರಾಮ ನಕಾಶೆ ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇಲ ಎಂದರೆ ನಿಜ. ಮೋಳೆ ಗ್ರಾಮದಲ್ಲಿ ಒಂದೊಂದು ಭಾಗದಲ್ಲಿ ಒಂದೊಂದು ಪ್ರಕಾರದ ಜಮೀನು ಇದೆ ಎಂದರೆ ಸರಿಯಲ್ಲ. ಮೋಳೆ ಗ್ರಾಮದಲ್ಲಿ ಇರುವ ಬೇರೆ ಬೇರೆ ಭಾಗದಲ್ಲಿ ಇದ್ದ ಜಮೀನುಗಳ ಬೆಲೆಗಳು ಬೇರೆ ಬೇರೆ ಇರುತ್ತವೆ ಎಂದರೆ ಸರಿಯಲ್ಲ. ಮಂಗಸೂಳಿ ಮತ್ತು ಐನಾಪುರ ಗ್ರಾಮವು ಅಭಿವೃದ್ಧಿ ಹೊಂದಿದ್ದರಿಂದ ಅಲ್ಲಿನ ಜಮೀನುಗಳಿಗೆ ಮೋಳೆ ಗ್ರಾಮದ ಜಮೀನಿಗಿಂತಲೂ ಹೆಚ್ಚಿನ ಬೆಲೆ ಇದೆ ಎಂದರೆ ಸರಿಯಲ್ಲ.

15. ಭೂಸ್ವಾಧೀನಪಡಿಸಿಕೊಂಡ ಜಮೀನು ಹೊರತುಪಡಿಸಿ ಮೋಳೆ ಗ್ರಾಮದಲ್ಲಿ ನನಗೆ ಸೇರಿದ ಬೇರೆ ಜಮೀನು ಇದೆ ಎಂದರೆ ಸಾಕ್ಷಿಯು ಇನ್ನೂ ಸ್ವಲ್ಪ ಜಮೀನು ಇದೆ ಎನ್ನುತ್ತಾರೆ. ನಾನು ಆ ರೀತಿ ಇದ್ದ ಬೇರೆ ಜಮೀನಿನಲ್ಲಿ ಕಬ್ಬು ಬೆಳೆಯುತ್ತೇನೆ. **ನಿಪಿ–3 ಮತ್ತು 4** ಕಬ್ಬಿನ ತೂಕದ ಪಾವತಿಯಲ್ಲಿ ಸರ್ವೆ ನಂ. ನಮೂದು ಮಾಡಿಲ್ಲ ಎಂದರೆ ನಿಜ. **ನಿಪಿ–3 ಮತ್ತು 4** ಕ್ಕೂ ಮತ್ತು ಭೂಸ್ವಾಧೀನಪಡಿಸಿಕೊಂಡ ಜಮೀನಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಆ ಖೊಟ್ಟಿ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ.

16. ನನ್ನ ಬ್ಯಾಂಕ್ ಖಾತೆ ಇದೆ ಎಂದರೆ ನಿಜ. ನಾನು ಬೆಳೆದ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಕಳಿಸುತ್ತಿದ್ದೇನು. ಸಕ್ಕರೆ ಕಾರ್ಖಾನೆಯವರು ಕಬ್ಬಿನ ಬಿಲ್ಲನ್ನು ಬ್ಯಾಂಕ್ ಖಾತೆಗೆ ಹಾಕುತ್ತಾರೆ ಎಂದರೆ ನಿಜ. ನನ್ನ ಜಮೀನು ಭೂಸ್ವಾಧೀನಪಡಿಸಿಕೊಳ್ಳುವ ಮೊದಲು ಜಮೀನಿಲ್ಲಿ ಬೆಳೆದ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಕಳಿಸಿದಾಗ ಕಬ್ಬಿನ ಬಿಲ್ಲನ್ನು ನನ್ನ ಬ್ಯಾಂಕ್ ಖಾಾತೆಗೆ ಹಾಕಿರುತ್ತಾರೆ.

ಆ ರೀತಿ ನನ್ನ ಬ್ಯಾಂಕ್ ಖಾತೆಗೆ ಕಬ್ಬಿನ ಬಿಲ್ಲನ್ನು ಹಾಕಿದ ಬಗ್ಗೆ ನನ್ನ ಬ್ಯಾಂಕ ಅಕೌಂಟ ಸ್ಟೇಟಮೆಂಟನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇಲ್ಲ ಎಂದರೆ ನಿಜ.

17. ನಮ್ಮ ಭೂಸ್ವಾಧೀನಪಡಿಸಿಕೊಂಡ ಜಮೀನಿನಲ್ಲಿ ಎಕರೆಗೆ 80 ರಿಂದ 100 ಟನ್ ಕಬ್ಬು ಬೆಳೆದ ಬಗ್ಗೆ ಮತ್ತು ಪ್ರತಿ ಟನ್ ಗೆ 2500 ರಿಂದ 2700 ರೂ. ಕೊಡುತ್ತಿದ್ದರು ಎಂದು ತೋರಿಸುವ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ನಿಜ. ನಮ್ಮ ಜಮೀನಿನ ಕಬ್ಬು ಕಟಾವು ಮಾಡಿದ ನಂತರ ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂ. 5 ರಲ್ಲಿ ಹೇಳಿದಂತೆ ಹುರುಳಿ, ಶೇಂಗಾ, ಸೂರ್ಯಪಾನ, ಜೋಳ, ಕಡಲೆ, ಮೆಣಸಿನ ಗಿಡ, ಅರಿಶಿಣ ಬೆಳೆಗಳನ್ನು ಬೆಳೆಯುತ್ತಿದ್ದೇವೆ ಎಂದು ತೋರಿಸಲು ಮತ್ತು ಪ್ರತಿ ಎಕರೆಗೆ 1 ಲಕ್ಷ ಲಾಭ ಬರುತ್ತಿತ್ತು ಎಂದು ತೋರಿಸುವ ದಾಖಲೆ ಹಾಜರು ಮಾಡಿಲ್ಲ ಎಂದರೆ ನಿಜ. ನಮ್ಮ ಜಮೀನಿನಲ್ಲಿ ಕಬ್ಬು ಆಗಲೀ, ಇತರ ಬೆಳೆಗಳಾಗಲೀ ಯಾವುದೂ ಬೆಳೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಆ ರೀತಿ ಬೆಳೆಯಲಾಗುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

18. ಮೋಳೆ ಗ್ರಾಮದಲ್ಲಿ ರೈತರಿಗೆ ಸಾಲ ಕೊಡಬೇಕಾದರೆ ಜಮೀನು ಅಡ ಇಟ್ಟು ಸಾಲ ಕೊಡುತ್ತಾರೆ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿದ ಮೋಳೆ ಗ್ರಾಮದ ಖರೀದಿ ಕರಾರು ಪತ್ರ **ನಿಪಿ-7, 9 & 10** ಹಣಕಾಸಿನ ಭದ್ರತೆಗಾಗಿ ಮಾಡಿಕೊಟ್ಟ ಖರೀದಿ ಪತ್ರ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿದ ಖರೀದಿ ಕರಾರು ಪತ್ರದ ಆಧಾರದ ಮೇಲೆ ಖರೀದಿ ಪತ್ರ ಆಗಿದೆಯೋ ಇಲ್ಲವೋ ಎಂದು ಸಬ್ ರೆಜಿಸ್ಟರ ಕಚೇರಿಗೆ ಹೋಗಿ ವಿಚಾರಣೆ ಮಾಡಿರುತ್ತೇವೆ. **ನಿಪಿ-7, 9 & 10** ಖರೀದಿ ಕರಾರುಪತ್ರದ ಆಧಾರದ ಮೇಲೆ ಕ್ರಯ ಪತ್ರ ಆಗಿದೆ. ಆ ಕ್ರಯ ಪತ್ರವನ್ನು ನನಗೆ ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇಲ್ಲ.

19. ಮೋಳೆ ಗ್ರಾಮದ ನಾನು ಹಾಜರು ಮಾಡಿದ ಕ್ರಯ ಪತ್ರದಲ್ಲಿ ನಮೂದು ಮಾಡಿದ ಸರ್ವೆ ನಂ.220/2 ಮತ್ತು ನಮ್ಮ ಭೂಸ್ವಾಧೀನಪಡಿಸಿಕೊಂಡ ಜಮೀನು ಒಂದೇ ರೀತಿಯ ಜಮೀನು ಎಂದು ತೋರಿಸಲು ದಾಖಲೆಗಳನ್ನು ಹಾಜರು ಮಾಡಿಲ್ಲ. ಸಾಮಾನ್ಯವಾಗಿ 5 ಗಂಟೆವರೆಗಿನ ಜಮೀನನ್ನು ವ್ಯಾಪಾರ ಉದ್ದೇಶಕ್ಕೆ ಖರೀದಿ ಮಾಡುತ್ತಾರೆ ಎಂದರೆ ಸರಿಯಲ್ಲ. **ನಿಪಿ–5** ಖರೀದಿ ಪತ್ರ ಇದು ಒಕ್ಕಲುತನ ಮಾಡಲು ಮಾಡಿದ ಖರೀದಿ ಪತ್ರ ಅಂದರೆ ಸರಿಯಲ್ಲ. ಅದು ತುಂಡು ಜಮೀನಿನ ವ್ಯಾಪಾರದ ಉದ್ದೇಶಕ್ಕಾಗಿ ಖರೀದಿ ಮಾಡಿದ ಬಗ್ಗೆ ಮಾಡಿದ ಖರೀದಿ ಪತ್ರ ಅಂದರೆ ಸರಿಯಲ್ಲ. **ನಿಪಿ–5 ರಿಂದ 9** ರಲ್ಲಿ ಕಾಣಿಸಿದ ಜಮೀನು ಮತ್ತು ನಮ್ಮ ಭೂಸ್ವಾಧೀನಪಡಿಸಿಕೊಂಡ ಜಮೀನು ಒಂದೇ ರೀತಿಯದ್ದು ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ ಎಂದರೆ ನಿಜ. ನಾನು ಹಾಜರು ಮಾಡಿ ಗುರುತಿಸಿದ ಮೋಳೆ, ಮಂಗಸೂಳಿ ಮತ್ತು ಐನಾಪುರ ಗ್ರಾಮದ ಖರೀದಿ ಪತ್ರ, ಕರಾರು ಪತ್ರ ಮತ್ತು ತೀರ್ಪಿನಲ್ಲಿ ಕಾಣಿಸಿದ ಜಮೀನುಗಳು ನಮ್ಮ ಭೂಸ್ವಾಧೀನಪಡಿಸಿಕೊಂಡ ಜಮೀನಿಗಿಂತ ಉತ್ತಮ ಗುಣಮಟ್ಟದ ಮತ್ತು ಹೆಚ್ಚಿನ ಬೆಲೆ ಬಾಳುವ ಜಮೀನು ಆಗಿದ್ದರಿಂದ ನಮ್ಮ ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ ಅಷ್ಟು ಕಿಮ್ಮತ್ತು ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿದ ಕಬ್ಬಿನ ದರ ಪಟ್ಟಿ ಮತ್ತು ಇಳುವರಿ ಪತ್ರ ನನ್ನ ಜಮೀನಿಗೆ ಸಂಬಂಧಿಸಿದ್ದು ಅಲ್ಲ ಎಂದರೆ ನಿಜ.

20. ಭೂಸ್ವಾಧೀನಾಧಿಕಾರಿಗಳು ಜಮೀನು ಸ್ವಾಧೀನಪಡಿಸಲು ದಿನಾಂಕ 25.07.2013 ರಂದು ಅಧಿಸೂಚನೆ ಹೊರಡಿಸಲಾಗಿದೆ ಎಂದರೆ ನಿಜ. ಅಧಿಸೂಚನೆ ಆದ ನಂತರ ಭೂಸ್ವಾಧೀನಾಧಿಕಾರಿಗಳು ನಮಗೆ ನೊಟೀಸು ನೀಡಿದರು ಎಂದರೆ ನಿಜ.

ಭೂಸ್ವಾಧೀನಾಧಿಕಾರಿಗಳು ಮತ್ತು ನೀರಾವರಿ ಇಲಾಖೆಯವರು ನಮ್ಮ ಜಮೀನಿಗೆ ಬಂದು ಪರಿವೀಕ್ಷಣೆ ಮಾಡಿಕೊಂಡು ಹೋಗಿದ್ದಾರೆ ಎಂದರೆ ನಿಜ. ಭೂಸ್ವಾಧೀನಾಧಿಕಾರಿಗಳು ಜಮೀನಿಗೆ ಭೇಟಿ ನೀಡಿ ಜಮೀನಲ್ಲಿ ಬೆಳೆದ ಬೆಳೆ, ಮಣ್ಣಿನ ಗುಣಧರ್ಮ, ನೀರಿನ ಮೂಲ ಇವುಗಳನ್ನು ಪರಿಶೀಲನೆ ಮಾಡಿ ಯೋಗ್ಯ ಪರಿಹಾರದ ಹಣ ನಿಗಧಿ ಮಾಡಿದ್ದರು ಎಂದರೆ ಸರಿಯಲ್ಲ. ಅವಾರ್ಡಿನ ಕೋಷ್ಠಕ 3 ರಲ್ಲಿ ನಮೂದಿಸಿದ ಜಮೀನಿನ ಖರೀದಿ ವ್ಯವಹಾರಗಳು 2010 ರಿಂದ 2012 ವರೆಗೆ ಆದ ಖರೀದಿ ವ್ಯವಹಾರಗಳು ಎಂದರೆ ನಿಜ. ಕೋಷ್ಠಕ ನಂ.3 ರಲ್ಲಿ ನಮೂದಿಸಿದ ಜಮೀನುಗಳ ಅಂಕಿ ಅಂಶಗಳ ಆಧಾರದ ಮೇಲೆ ನಮ್ಮ ಜಮೀನಿಗೂ ಯೋಗ್ಯ ಬೆಲೆ ನಿಗಧಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಅವಾರ್ಡ ಹಣ ಪಡೆದಿದ್ದೇನೆ ಎಂದರೆ ಸರಿಯಲ್ಲ. ಭೂಸ್ವಾಧೀನಾಧಿಕಾರಿಗಳು ನಮ್ಮ ಜಮೀನಿಗೆ ಅಧಿಸೂಚನೆ ಕಾಲಕ್ಕೆ ಇದ್ದ ಬೆಲೆಗಿಂತಲೂ ಹೆಚ್ಚಿನ ಮಾರುಕಟ್ಟೆ ಬೆಲೆ ನಿಗಧಿ ಮಾಡಿ ಪರಿಹಾರದ ಹಣ ಕೊಟ್ಟರೂ ಸಹ ಇನ್ನೂ ಹೆಚ್ಚಿನ ಹಣ ಪಡೆಯಲು ಎಂದು ನಾನು ಸುಳ್ಳು ರೆಫರೆನ್ಸ ಅರ್ಜಿ ಸಲ್ಲಿಸಿ ಸುಳ್ಳು ದಾಖಲೆಗಳನ್ನು ಹಾಜರು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2ನೇ ಎದುರುದಾರ ಪರ ಶ್ರೀ. ಎಲ್.ಟಿ.ಟಿ. ರವರಿಂದ**

21. ಭೂಸ್ವಾಧೀನಾಧಿಕಾರಿಗಳು ನಮ್ಮ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ನಮಗೆ ನೋಟಿಸು ನೀಡಿದ್ದರು ಎಂದರೆ ನಿಜ. ಭೂಸ್ವಾಧೀನಾಧಿಕಾರಿಗಳು ನೊಟೀಸು ನೀಡಿದ ನಂತರ ಭೂಸ್ವಾಧೀನಾಧಿಕಾರಿಗಳು ಮತ್ತು ನೀರಾವರಿ ಇಲಾಖೆಯವರು ಭೂಸ್ವಾಧೀನಪಡಿಸಿಕೊಂಡ ಜಮೀನು ಮೋಜನಿ ಮಾಡಲು ಸ್ಥಳಕ್ಕೆ ಬಂದು ಸ್ಥಳ ಪರಿಶೀಲನೆ ಮಾಡಿ ಮೋಜನಿ ಮಾಡಿಕೊಂಡು ಹೋಗಿದ್ದಾರೆ ಎಂದರೆ ಸಾಕ್ಷಿಯು ಅವರು ನಮ್ಮನ್ನು ಕರೆದಿಲ್ಲ ಆದರೆ ಅವರೇ

ಮೋಜನಿ ಮಾಡಿ ಹೋಗಿದ್ದಾರೆ ಎನ್ನುತ್ತಾರೆ. ಭೂಸ್ವಾಧೀನಾಧಿಕಾರಿಗಳು ಮತ್ತು ನೀರಾವರಿ ಇಲಾಖೆಯವರು ನಮ್ಮ ಸಮಕ್ಷಮವೇ ಸ್ಥಳ ಪರಿಶೀಲನೆ ಮಾಡಿ ಭೂಸ್ವಾಧೀನಪಡಿಸಿಕೊಂಡ ಜಮೀನನ್ನು ಮೋಜನಿ ಮಾಡಿದ್ದರೂ ಸಹ ನಮ್ಮ ಸಮಕ್ಷಮ ಸ್ಥಳ ಪರಿಶೀಲನೆ ಮಾಡಿಲ್ಲ ಮತ್ತು ಮೋಜನಿ ಮಾಡಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಭೂಸ್ವಾಧೀನಪಡಿಸಿಕೊಂಡ ಜಮೀನು ಬರಡು ಜಮೀನು ಆಗಿತ್ತು ಮತ್ತು ಒಣಬೇಸಾಯದ ಜಮೀನು ಆಗಿತ್ತು ಎಂದರೆ ಸರಿಯಲ್ಲ. ನಮ್ಮ ಜಮೀನು ನೀರಾವರಿ ಜಮೀನು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ ಕಬ್ಬು, ಅರಿಶಿಣ ಮತ್ತು ಇತರ ನೀರಾವರಿ ಬೆಳೆಗಳನ್ನು ಬೆಳೆಯುತ್ತಿದ್ದೇವು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

22. ನಮ್ಮ ಜಮೀನಿನಲ್ಲಿ ಬಾವಿ ಇತ್ತು ಎಂದು ತೋರಿಸಲು ಪಂಪ್ ಸೆಟ್ ಅಳವಡಿಸಲಾಗಿತ್ತು ಎಂದು ತೋರಿಸಲು ನಾನು ಪಂಪ್ ನ ಬಿಲ್ಲನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಅರಿಶಿಣ ಬೆಳೆದು ಮಾರಾಟ ಮಾಡಿದ ಬಗ್ಗೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನಾನು ಕಬ್ಬಿನ ತೂಕದ ಬಿಲ್ಲನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ನಾನು ಹಾಜರು ಮಾಡಿದ ಕಬ್ಬಿನ ಬಿಲ್ಲನಲ್ಲಿ ಸರ್ವೆ ನಂಬರ ನಮೂದು ಇಲ್ಲ ಎಂದರೆ ನಿಜ. ನಮ್ಮ ಜಮೀನಿನಲ್ಲಿ ಕಬ್ಬು ಬೆಳೆದು ಅದನ್ನು ಸಕ್ಕರೆ ಕಾರ್ಖಾನೆಗೆ ಕಳಿಸುತ್ತಿದ್ದೇವು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಪ್ರತಿ ಎಕರೆಗೆ 80 ರಿಂದ 100 ಟನ್ ಕಬ್ಬು ಬೆಳೆಯುತ್ತಿದ್ದೇವು ಎಂದು, ಪ್ರತಿ ಟನ್ ಗೆ 2500 ರಿಂದ 2700 ವರೆಗೆ ದರ ಇತ್ತು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು

ಕಬ್ಬು ಕಟಾವು ಮಾಡಿದ ನಂತರ ಲಗು ಬೆಳೆಗಳಾದ ಹುರುಳಿ, ಶೇಂಗಾ, ಸೂರ್ಯಪಾನ, ಗೋವಿನಜೋಳ, ಕಡಲೆ, ಅರಿಶಿಣ, ಉಳ್ಳಾಗಡ್ಡಿ, ಮೆಣಸಿನ ಗಿಡ ಇವುಗಳನ್ನು ಬೆಳೆಯುತ್ತಿದ್ದೇವು ಎಂದು, ಅವುಗಳಿಂದ ಪ್ರತಿ ಎಕರೆಗೆ 1 ಲಕ್ಷ ಆದಾಯ ಗಳಿಸುತ್ತಿದ್ದೇವು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ ಲಗು ಬೆಳೆಗಳನ್ನು ಬೆಳೆದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ನಿಜ. ಲಗು ಬೆಳೆಯಿಂದ ಪ್ರತಿ ಎಕರೆಗೆ 1 ಲಕ್ಷ ಆದಾಯ ಬರುತ್ತಿತ್ತು ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ ಎಂದರೆ ನಿಜ.

23. **ನಿಪಿ-1 ಮತ್ತು 2** ಆರ್.ಟಿ.ಸಿ ಕಾಲಂ ನಂ.12(8) ರಲ್ಲಿ ನೀರಾವರಿಯ ಮೂಲವನ್ನು ನಮೂದು ಮಾಡಿಲ್ಲ ಎಂದರೆ ನಿಜ. ಕಾಲಂ ನಂ.12(13) ರಲ್ಲಿ ನನ್ನ ಮುಖ್ಯ ವಿಚಾರಣೆಯಲ್ಲಿ ನಮೂದು ಮಾಡಿದಂತೆ ಬೆಳೆಗಳನ್ನು ನಮೂದು ಮಾಡಿಲ್ಲ ಎಂದರೆ ನಿಜ.

24. ಮೋಳೆ ಊರಿನಲ್ಲಿ ಇರುವ ಜಮೀನುಗಳು ಒಂದೇ ರೀತಿಯದ್ದು ಇಲ್ಲ ಎಂದರೆ ಸರಿಯಲ್ಲ. ಮೋಳೆಯಲ್ಲಿ ಕೆಲವೊಂದು ಜಮೀನು ಒಣ ಬೇಸಾಯದ ಜಮೀನು ಮತ್ತು ಕೆಲವು ಜಮೀನು ನೀರಾವರಿ ಇವೆ ಎಂದರೆ ಸಾಕ್ಷಿಯು ಹೆಚ್ಚಿನ ಜಮೀನುಗಳು ನೀರಾವರಿ ಇವೆ ಎನ್ನುತ್ತಾರೆ. ಮೋಳೆಯಲ್ಲಿ ಇರುವ ಒಂದು ಜಮೀನಿನಿಂದ ಇನ್ನೊಂದು ಜಮೀನಿಗೆ ಹೋಲಿಸಿದರೆ ಜಮೀನುಗಳ ಕಿಮ್ಮತ್ತು ಬೇರೆ ಬೇರೆ ಇವೆ ಎಂದರೆ ಸರಿಯಲ್ಲ.

25. ಮೋಳೆಯಿಂದ ಮಂಗಸೂಳಿಗೆ ಅರ್ಧ ಕಿ.ಮೀ ದೂರ ಇದೆ. ಮೋಳೆಯಿಂದ ಮಂಗಸೂಳಿಗೆ 10 ರಿಂದ 15 ಕಿ.ಮೀ ದೂರ ಇದ್ದರೂ ಸಹ ಅರ್ಧ ಕಿ.ಮೀ ದೂರ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಐನಾಪುರದಿಂದ ಮೋಳೆಗೆ ಅರ್ಧ ಕಿ.ಮೀ

ದೂರ ಇದೆ. ಐನಾಪುರದಿಂದ ಮೋಳೆಗೆ 10 ರಿಂದ 15 ಕಿ.ಮೀ ದೂರ ಇದ್ದರೂ ಸಹ ಅರ್ಧ ಕಿ.ಮೀ ದೂರ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೋಳೆಯಿಂದ ಮಂಗಸೂಳಿ ಮತ್ತು ಐನಾಪುರ ಎಷ್ಟು ದೂರದಲ್ಲಿ ಇವೆ ಎಂದು ತೋರಿಸುವ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಮೋಳೆಯಲ್ಲಿ **ನಿಪಿ–5** ಖರೀದಿ ಪತ್ರ ಹೊರತುಪಡಿಸಿ ಬೇರೆ ಖರೀದಿ ಪತ್ರ ಆಗಿದೆಯೋ ಇಲ್ಲವೋ ಎಂದರೆ ಸಾಕ್ಷಿಯು ಆಗಿರಬಹುದು ಎನ್ನುತ್ತಾರೆ. **ನಿಪಿ–5** ಖರೀದಿ ಪತ್ರವನ್ನು ಪಡೆಯುವ ಹೊರತು ನೀವು ಬೇರೆ ಖರೀದಿ ಪತ್ರದ ನಕಲು ಕೊಡುವಂತೆ ಸಬ್ ರೆಜಿಸ್ಟ್ರಾರ ಕಚೇರಿಗೆ ಅರ್ಜಿ ಹಾಕಿದ್ದೀರಾ ಎಂದರೆ ಸಾಕ್ಷಿಯು ಅರ್ಜಿ ಹಾಕಿಲ್ಲ ಎನ್ನುತ್ತಾರೆ. ಭೂಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಿದ 3 ವರ್ಷದ ಹಿಂದಿನಿಂದ ಮೋಳೆಯಲ್ಲಿ ಹಲವಾರು ಖರೀದಿ ಪತ್ರಗಳು ಆಗಿದ್ದರೂ ಸಹ ನಾನು ಹೆಚ್ಚಿನ ಪರಿಹಾರದ ಹಣ ಪಡೆಯುವ ಉದ್ದೇಶದಿಂದ ಐನಾಪುರ ಮತ್ತು ಮಂಗಸೂಳಿ ಗ್ರಾಮಗಳ ಖರೀದಿ ಪತ್ರಗಳನ್ನು ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿದ ಇಳುವರಿ ಪ್ರಮಾಣ ಪತ್ರ ಮತ್ತು ದರ ಪತ್ರ ಇವುಗಳು ನನ್ನ ಕೇಸಿಗೆ ಅನುಕೂಲ ಆಗದೇ ಇದ್ದರೂ ಆ ದಾಖಲೆಗಳನ್ನು ತಂದು ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ಎಲ್.ಎ.ಸಿ ನಂ.129/21 ರ ತೀರ್ಪು ನಮ್ಮ ಕೇಸಿಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ಕರ್ನಾಟಕ ಮಾನ್ಯ ಉಚ್ಚನ್ಯಾಯಾಲಯ ಧಾರವಾಡ ಬೆಂಚ್ ನ ಎಂ.ಎಸ್.ಎ.100154/2017 ರ ತೀರ್ಪು ಸಹ ನಮ್ಮ ಕೇಸಿಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ಎಂ.ಎಸ್.ಎ 100154/2017 ಇದು ಹಳೆಯ ಕಾಯ್ದೆ ಅಡಿಯಲ್ಲಿ ತೀರ್ಪು ಆಗಿದ್ದರಿಂದ ಅದನ್ನು ಈ ಕೇಸಿಗೆ ಅನ್ವಯಿಸಲು ಬರುವುದಿಲ್ಲ

ಎಂದರೆ ಸರಿಯಲ್ಲ.

26. ಭೂಸ್ವಾಧೀನಾಧಿಕಾರಿಗಳು ಅವಾರ್ಡ ಮಾಡಿದ ನಂತರ ಅವಾರ್ಡ ಹಣ ಪಡೆಯುವಂತೆ ನಮಗೆ ನೋಟಿಡಿ ನೀಡಿದ್ದರು ಎಂದರೆ ನಿಜ. ಆ ರೀತಿ ನೋಟಿಸು ನೀಡಿದ ಎಷ್ಟು ತಿಂಗಳಲ್ಲಿ ನೀವು ರೆಫರೆನ್ಸ ಅರ್ಜಿ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ನಿಗದಿತ ಸಮಯದಲ್ಲಿ ಸಲ್ಲಿಸಿದ್ದೇನು ಎನ್ನುತ್ತಾರೆ. ನಾವು ಭೂಸ್ವಾಧೀನಾಧಿಕಾರಿಗಳ ಮುಂದೆ ನಿಗದಿತ ಅವಧಿಯೊಳಗೆ ರೆಫರೆನ್ಸ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಭೂಸ್ವಾಧೀನಾಧಿಕಾರಿಗಳು ಮಾಡಿದ ಅವಾರ್ಡ ಮತ್ತು ನಿಗದಿ ಮಾಡಿ ನಮಗೆ ಕೊಟ್ಟ ಅವಾರ್ಡ ಹಣ ಯೋಗ್ಯವಾಗಿದ್ದರೂ ಸಹ ನಾನು ಹೆಚ್ಚಿನ ಪರಿಹಾರದ ಹಣ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ತಂದು ಹಾಜರು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4ನೇ ಅಧಿಕ ಜಿಲ್ಲಾ ಮತ್ತು ಸತ್ರ ಶೆನ್ಸ ನ್ಯಾಯಾಧೀಶರು,
ಬೆಳಗಾವಿ.